## ಸಾರಿ

ಗುಂಡನ ಗೃಹಪ್ರವೇಶಕ್ಕೆ ಗೆಳೆಯ ರಂಗನಿಗೆ ಹೋಗಲು ಆಗಿರಲಿಲ್ಲ. ಗೃಹಪ್ರವೇಶ ಮುಗಿದ ವಾರದ ಬಳಿಕ ಗುಂಡನ ಮನೆಗೆ ಹೋಗಿ, 'ಸಾರಿ, ಗೃಹಪ್ರವೇಶಕ್ಕೆ ಬರಲಾಗಲಿಲ್ಲ' ಎಂದ ರಂಗ. 'ಏನಾದರೂ ಹೇಳು, ಸಾರಿ ಅಂತ ಮಾತ್ರ ಹೇಳಬೇಡ' ಎಂದ ಗುಂಡ. 'ಸಾರಿ ಅಂತ ಹೇಳಿದರೆ ತಪ್ಪೇನು?' ಆಶ್ಚರ್ಯದಿಂದ ಕೇಳಿದ ರಂಗ. 'ಅಯ್ಯೊ, ಕಳೆದ ತಿಂಗಳು ನನ್ನ ತಾತನನ್ನು ಆಸ್ಪತ್ರೆಗೆ ಸೇರಿಸಿದ್ವಿ. ವೈದ್ಯರು ಬಂದು ಹೇಳಿದ್ದು ಒಂದೇ ಮಾತು, 'ಸಾರಿ' ಅಂತ.... ಆಮೇಲೆ ನನ್ನ ತಾತ ಮೇಲೇಳಲೇ ಇಲ್ಲ' ಎಂದ ಗುಂಡ. 'ಅಯ್ಯೊ, ಹೌದೆ? ಸಾರಿ' ಎಂದ ರಂಗ!

**ಶಂಕರೇಗೌಡ ತುಂಬಕೆರೆ**





## ಸೀರಿಯಸ್ ಕೇಸ್

ಯುವ ವೈದ್ಯನೊಬ್ಬ ತನ್ನ ಹೆಂಡತಿಯೊಡನೆ ಮನೆಯಲ್ಲಿ ಲೋಕಾಭಿರಾಮವಾಗಿ ಹರಟುತ್ತಾ ಕುಳಿತಿದ್ದ. ಅವನ ಗೆಳೆಯನ ಫೋನ್ ಬಂತು, 'ನಾವು ಒಟ್ಟು ನಾಲ್ಕು ಜನರು ಕುಳಿತಿದ್ದೇವೆ. ನಮ್ಮ ಮುಂದೆ ಚಿಕನ್ 65 ಮತ್ತು ವಿಸ್ಕಿ ಬಾಟಲ್ ಇದೆ. ಬರಲು ಸಾಧ್ಯವೆ?' ಎಂದು ಕೇಳಿದ. 'ಈಗಲೇ ಬರುತ್ತೇನೆ. ನಾನು ಬರುವವರೆಗೂ ತಡೆಯಿರಿ, ಕೆಲಸ ಮುಂದುವರೆಸಬೇಡಿ' ಎಂದ ವೈದ್ಯ ಥಟ್ಟನೇ ಮೇಲೆದ್ದು ಹೆಂಡತಿಗೆ ಹೇಳಿದ, 'ತುಂಬಾ ಸೀರಿಯಸ್ ಇದೆ, 65 ವರ್ಷದ ಪೇಶಂಟ್, ನಾಲ್ಕು ಜನ ಕಿರಿಯ ವೈದ್ಯರಿದ್ದಾರೆ. ತಕ್ಷಣ ನಾನು ಹೋಗಲೇಬೇಕು. ಇಲ್ಲದಿದ್ದರೆ ಅದು ಉಳಿಯುವುದೇ ಕಷ್ಟ' ಎಂದಾಗ ಹೆಂಡತಿ, 'ಬೇಗ ಹೋಗಿ' ಎಂದು ಬೀಳ್ಕೊಟ್ಟಳು.

**ಪ.ನಾ. ಹಳ್ಳಿ ಹರೀಶ್ ಕುಮಾರ್**

ಕಲೆ: ಗಣೇಶ ಆಚಾರ್ಯ